**ಕರ್ನಾಟಕ ಸರ್ಕಾರ**

ಸಂಖ್ಯೆ:ಪಪೂಶಿಇ/ಶೈ-ಶಾ/ಮೂಸೌ/ಅ-ಏ/02/2014-15

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು-12,
ದಿನಾಂಕ: 18-03-2015.

**ಜ್ಞಾಪನ**

**ವಿಷಯ:** 2014-15ನೇ ಸಾಲಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಸರ್ಕಾರವು **ವಿಶೇಷ ಘಟಕ ಯೋಜನೆ (ಎಸ್,ಸಿ,ಪಿ)** ಅಡಿಯಲ್ಲಿ ಒದಗಿಸಿರುವ ನಾಲ್ಕನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಇಡಿ 103 ಯೋಯೋಕ 2014, ದಿನಾಂಕ: 11-03-2015.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳಾದ ಪೀಠೋಪಕರಣ, ಪಾಠೋಪಕರಣ ಮತ್ತು ವಿಜ್ಞಾನ ವಿಭಾಗಕ್ಕೆ ಪ್ರಯೋಗಾಲಯ ಉಪಕರಣಗಳನ್ನು ಒದಗಿಸುವ ಸಲುವಾಗಿ 2014-15ನೇ ಸಾಲಿಗೆ ಸಾಲಿಗೆ **ವಿಶೇಷ ಘಟಕ ಯೋಜನೆ (ಎಸ್,ಸಿ,ಪಿ) ಲೆಕ್ಕಶೀರ್ಷಿಕೆ "2202-02-109-0-06-422(ಯೋಜನೆ)"** ಅಡಿಯಲ್ಲಿ **ರೂ.83.63** ಲಕ್ಷಗಳ ಅನುದಾನವನ್ನು ಇಲಾಖೆಗೆ ಒದಗಿಸಲಾಗಿದೆ. ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ನಾಲ್ಕನೇ **ಕಂತಿನ ಅನುದಾನವಾಗಿ** ರೂ.21.62 ಲಕ್ಷಗಳನ್ನು ಸದರಿ ಉದ್ದೇಶಕ್ಕೆ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ. ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಂದ ಬಂದಿರುವ ಕೋರಿಕೆಗನುಗುಣವಾಗಿ ಉಲ್ಲೇಖಿತ ಆದೇಶದಲ್ಲಿ ನಾಲ್ಕನೆಯ ಕಂತಾಗಿ ಬಿಡುಗಡೆ ಮಾಡಲಾಗಿರುವ ರೂ.21.62 ಲಕ್ಷಗಳ (ಇಪ್ಪತ್ತೊಂದು ಲಕ್ಷದ ಅರವತ್ತೆರಡು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಪೀಠೋಪಕರಣಗಳ ಖರೀದಿಗಾಗಿ 21 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಪ್ರತಿ ಕಾಲೇಜಿಗೆ ರೂ.60,000/- ದಂತೆ ಮತ್ತು ಪ್ರಯೋಗಾಲಯ ವಿಜ್ಞಾನ ಉಪಕರಣಗಳ ಖರೀದಿಗಾಗಿ 21 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ರೂ.40,000/- ದಂತೆ ಹಾಗೂ ಎರಡು ಕಾಲೇಜಿಗೆ 31,000/- ದಂತೆ ಈ ಜ್ಞಾಪನಕ್ಕೆ ಅನುಬಂಧಿಸಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅವುಗಳ ಮುಂದೆ ತೋರಿಸುವಂತೆ **ಲೆಕ್ಕ ಶೀರ್ಷಿಕೆ "2202-02-109-0-06-422(ಯೋಜನೆ)"** ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಹಣವನ್ನು ಅನುಬಂಧದಲ್ಲಿ ಸೂಚಿಸಲಾಗಿರುವ ಉದ್ದೇಶಕ್ಕೆ ಮಾತ್ರ ಬಳಸಿಕೊಳ್ಳಲು ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಮಂಜೂರು ಮಾಡಲಾಗಿದೆ.

**ಷರತ್ತುಗಳು:**

1. ಪಾರದರ್ಶಕತೆ ನಿಯಮಾನುಸಾರ ರೂ.1,00,000-00 ಕ್ಕಿಂತ ಹೆಚ್ಚಿನ ಖರೀದಿಯನ್ನು ಟೆಂಡರ್ ಮೂಲಕ ಹಾಗೂ ರೂ. 1,00,000-00 ಕ್ಕಿಂತ ಕಡಿಮೆ ಮೊತ್ತದ ಖರೀದಿಯನ್ನು ಕೊಟೇಷನ್ ಪಡೆದು ನಿಯಮಾನುಸಾರ ಅತೀ ಕಡಿಮೆ ದರವನ್ನು ಸೂಚಿಸಿರುವ ಸರಬರಾಜುದಾರರ ಮೂಲಕ ಖರೀದಿಸತಕ್ಕದ್ದು.
2. ಖರೀದಿಯು Description and Specification ಗೆ ಅನುಗುಣವಾಗಿರುವುದೇ ಎಂಬ ಬಗ್ಗೆ ದೃಢೀಕರಣ ಪತ್ರ ನೀಡತಕ್ಕದ್ದು.
3. ಸಂಬಂಧಿಸಿದ ಸರಬರಾಜುದಾರರಿಂದ ಬಿಲ್ಲುಗಳನ್ನು ನಾಲ್ಕು ಪ್ರತಿಗಳಲ್ಲಿ ಪಡೆಯತಕ್ಕದ್ದು ಹಾಗೂ ಖರೀದಿಸಿದ ಸಾಮಾನುಗಳು ಉತ್ತಮ ಸ್ಥಿತಿಯಲ್ಲಿರುವ ಬಗ್ಗೆ ಹಾಗೂ ಸಂಬಂಧಿಸಿದ ದಾಸ್ತಾನು ಪುಸ್ತಕದಲ್ಲಿ ನಮೂದಿಸಿ ಪ್ರಾಂಶುಪಾಲರು ದೃಢೀಕರಿಸಿರಬೇಕು. ದಾಸ್ತಾನು ಪ್ರಮಾಣ ಪತ್ರ (Stock Certificate) ಗಳನ್ನು ಬಿಲ್ಲುಗಳ ಹಿಂಬದಿಯಲ್ಲಿ ದಾಖಲಿಸತಕ್ಕದ್ದು. ಮತ್ತು ಖರೀದಿಸಿದ ವಸ್ತುಗಳ ವಿವರವನ್ನು ತಪ್ಪದೇ ದಾಸ್ತಾನು ಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವುದು.

..2

4. ಖರೀದಿಸಿದ ವಸ್ತುಗಳಿಗೆ ಒಂದೇ ಬಾರಿಗೆ ಡಿಸಿ ಬಿಲ್ಲನ್ನು ನಾಲ್ಕು ಪ್ರತಿಗಳಲ್ಲಿ ಪ್ರಾಂಶುಪಾಲರು ಸಿದ್ಧಪಡಿಸತಕ್ಕದ್ದು. ಡಿಸಿ ಬಿಲ್ಲಿನಲ್ಲಿ ಲೆಕ್ಕಶೀರ್ಷಿಕೆಯ ವಿವರಗಳನ್ನು ಸರಿಯಾಗಿ ನಮೂದಿಸಲಾಗಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳತಕ್ಕದ್ದು.
5. ಬಿಡುಗಡೆಯಾದ ಅನುದಾನವು ರೂ. 1 ಲಕ್ಷದ ಒಳಗೆ ಇದ್ದಲ್ಲಿ ಪ್ರಾಚಾರ್ಯರು ಕೊಟೇಷನ್ ಮುಖಾಂತರ ಖರೀದಿ ಪ್ರಕ್ರಿಯೆ ಪೂರೈಸುವುದು.

ಅ) ಎಲ್ಲಾ ಖರೀದಿ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

ಆ) ಸೀಲ್ಡ್ ಕೊಟೇಶನ್‌ಗಳನ್ನು 10 ದಿನದೊಳಗಾಗಿ ಆಹ್ವಾನಿಸುವುದು.

ಇ) ಪ್ರಾಂಶುಪಾಲರು, ವಿಜ್ಞಾನ ಉಪಕರಣಗಳನ್ನು ಖರೀದಿಗೆ ಸಂಬಂಧಪಟ್ಟ ವಿಷಯದ ಉಪನ್ಯಾಸಕ ಹಾಗೂ ಒಬ್ಬ ಹಿರಿಯ ಉಪನ್ಯಾಸಕರು ಒಳಗೊಂಡಂತ ಸಮಿತಿಯ ಸೀಲ್ಡ್ ಕೊಟೇಶನ್‌ಗಳನ್ನು ಆಯ್ದ ದಿನಾಂಕದಂದು ದರ ಪಟ್ಟಿ ನೀಡಿದವರ ಸಮ್ಮುಖದಲ್ಲಿ ಸಹಿ ಹಾಗೂ ಮೊಹರನ್ನು ದಾಖಲಿಸಿ ತೆರೆಯುವುದು. ನಂತರ **Comparitive statement** ಗೆ ಸಹಿ ಹಾಕಿ ಕಾರ್ಯಾದೇಶ ಹೊರಡಿಸುವುದು.

ಈ) ಸಾಮಗ್ರಿ ಖರೀದಿ ಮಾಡುವ ಮುನ್ನ ಅದರ ನಿರ್ಧಿಷ್ಟತೆಯನ್ನು **(specification)** ನಿಖರವಾಗಿ ನೀಡುವುದು. ಸಾಮಗ್ರಿಯು ನಿಮ್ಮ **specification** ಗೆ ನಿಖರವಾಗಿ ಇಲ್ಲದೆ ಇದ್ದ ಪಕ್ಷದಲ್ಲಿ ಮುಂದಿನ ಎರಡನೆಯ ಕಡಿಮೆ ದರದ ಕೊಟೇಶನ್‌ನನ್ನು ಆಯ್ಕೆ ಮಾಡಿ ಖರೀದಿಸುವುದು.

ಯಾವುದೇ ಕಾರಣಕ್ಕೂ ಈ ಅನುದಾನವು Lapse ಆಗದಂತೆ ಬಳಸಿಕೊಳ್ಳಲು ಸೂಚಿಸಿದೆ. Lapse ಆದ ಪಕ್ಷದಲ್ಲಿ ಆಯಾ ಕಾಲೇಜುಗಳ ಪ್ರಾಂಶುಪಾಲರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು. ಈ ಆದೇಶ ತಲುಪಿದ ಕೂಡಲೆ ನಿಯಮಾನುಸಾರ ಖರೀದಿಸುವುದು. ಖರೀದಿ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಸೂಚನೆಗಳನ್ನು ನಿರ್ಲಕ್ಷಿಸಿದಲ್ಲಿ ಸಂಬಂಧಿಸಿದ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿಸಿ ಶಿಸ್ತು ಕ್ರಮ ಜರುಗಿಸಲಾಗುವುದು.

6. ಸಂಬಂಧಿಸಿದ ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿ ಮಾಡುವುದು. ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟ ಕಾಲೇಜುಗಳಿಗೆ ಸದರಿ ಆದೇಶದಲ್ಲಿ ಬಿಡುಗಡೆ ಮಾಡಿರುವ ಒಟ್ಟು ಮೊತ್ತವನ್ನು ಸಂಪೂರ್ಣವಾಗಿ ದಿನಾಂಕ:28-03-2015ರೊಳಗೆ ಬಳಕೆ ಮಾಡುವಂತೆ ನಿಗಾವಹಿಸಿ ಬಳಕೆ ಪ್ರಮಾಣ ಪತ್ರವನ್ನು ಈ ಕಛೇರಿಯ ಜಂಟಿ ನಿರ್ದೇಶಕರು(ಮೂಲಭೂತ ಸೌಕರ್ಯ), ಇವರಿಗೆ ತಪ್ಪದೇ ಕಳುಹಿಸತಕ್ಕದ್ದು. ಸರ್ಕಾರದ ಕಾರ್ಯದರ್ಶಿಗಳ ಸಮ್ಮುಖದಲ್ಲಿ ನಡೆಯಲಿರುವ ಮಾಸಿಕ **(MPIC)** ವೆಚ್ಚದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಬಗ್ಗೆ ಕ್ರೋಢೀಕೃತ ಮಾಹಿತಿಯನ್ನು ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ ಸಂಬಂಧಿಸಿದ ಉಪನಿರ್ದೇಶಕರು ತಮ್ಮ ಜಿಲ್ಲೆಯ ವೆಚ್ಚದ ವರದಿಯನ್ನು ಜಂಟಿ ನಿರ್ದೇಶಕರು (ಮೂಲಭೂತ ಸೌಕರ್ಯ) ಇವರಿಗೆ ಸಲ್ಲಿಸಲು ಮತ್ತೊಮ್ಮೆ ಸೂಚಿಸಿದೆ.
7. ಬಿಡುಗಡೆಯಾದ ಅನುದಾನದಲ್ಲಿ ಖರೀದಿಸಿದ ಪ್ರಾಯೋಗಿಕ ಉಪಕರಣಗಳ ಹೆಸರು, ಸಂಖ್ಯೆ, ತಗುಲಿದ ಒಟ್ಟು ವೆಚ್ಚದ ವಿವರಗಳನ್ನೊಳಗೊಂಡ ವರದಿಯನ್ನು ಇಲಾಖೆಯ ಜಂಟಿ ನಿರ್ದೇಶಕರು (ಮೂಲಭೂತ ಸೌಕರ್ಯ) ಇವರಿಗೆ ಕಳುಹಿಸತಕ್ಕದ್ದು, ಸರಬರಾಜಾದ ಉಪಕರಣ/ ಸಾಧನ ಪೀಠೋಪಕರಣಗಳ ಸಂಖ್ಯೆ ಅಥವಾ ಗುಣಮಟ್ಟದಲ್ಲಿ ಯಾವುದೇ ರೀತಿಯ ವ್ಯತ್ಯಾಸ ಕಂಡುಬಂಧಲ್ಲಿ ಈ ಸಂಬಂಧ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.
8. ಪ್ರಯೋಗಶಾಲಾ ಉಪಕರಣಗಳನ್ನು ಖರೀದಿಸುವಾಗ ಸಂಬಂಧಿಸಿದ ಉಪನ್ಯಾಸಕರಿಂದ ಅವಶ್ಯಕತೆ ಇರುವ ವಸ್ತುಗಳ ಬೇಡಿಕೆ ಪಟ್ಟಿಯನ್ನು ಪಡೆದು ನಂತರ ಖರೀದಿಸುವುದು.
9. ವಿದ್ಯಾರ್ಥಿಗಳಿಗೆ ಪೀಠೋಪಕರಣ, ಪಾಠೋಪಕರಣ ಮತ್ತು ವಿಜ್ಞಾನ ವಿಭಾಗಕ್ಕೆ ಪ್ರಯೋಗಾಲಯ ಉಪಕರಣಗಳು ಮತ್ತು ಪ್ರಯೋಗಾಲಯದ ವಸ್ತುಗಳನ್ನು ಖರೀದಿಸುವಾಗ ಖರೀದಿಸುವ ವಸ್ತುಗಳ ಗುಣಮಟ್ಟ ಕಾಪಾಡಿಕೊಂಡು ಕನಿಷ್ಟ ದರವನ್ನು ಸೂಚಿಸಿರುವವರಿಂದ ಮಾತ್ರ ಖರೀದಿಸಲು ಕ್ರಮ ತೆಗೆದುಕೊಳ್ಳುವುದು.

***(ವಿಶೇಶ ಸೂಚನೆ: ಬಳಕೆ ಪ್ರಮಾಣ ಪತ್ರವನ್ನು ತಪ್ಪದೆ ಸಲ್ಲಿಸುವುದು)***

Godbole

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ,

<u>**ಪ್ರತಿಗಳು:**</u>

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸಂಬಂಧಿಸಿಧ ಖಜಾನಾಧಿಕಾರಿಗಳಿಗೆ.
4. ಲೆಕ್ಕಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
5. ಸಂಬಂಧಿಸಿದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಸೂಕ್ತ ಕ್ರಮಕ್ಕಾಗಿ
6. ಆಯವ್ಯಯ/ಲೆಕ್ಕಸಮನ್ವಯ ಅಧೀಕ್ಷಕರು
7. ಸಂಬಂಧಿಸಿದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಜಿಲ್ಲಾ ಉಪನಿರ್ದೇಶಕರ ಮೂಲಕ.
8. ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ,
9. ಕಛೇರಿ ಪ್ರತಿ.

# GOVERNMENT OF KARNATAKA
## DEPARTMENT OF PRE UNIVERSITY EDUCATION
## GRANTS SANCTIONED FOR DESKS/FURNITURE & LAB EQUIPEMENTS
## UNDER SCP SCHEME FOR GOVT PU COLLEGES DURING 2014-15
## HEAD OF ACCOUNT 2202-02-109-0-06-422 (PLAN) IVth QUARTER
## MEMO NO:PAPUSHIEE/SHY.SHA/MOO.SOU/A-B/02/2014-15

| SL.NO | NICODE | INAME | IADD1 | IADD2 | FUR. | SCI_LAB | TOTAL |
|---|---|---|---|---|---|---|---|
| 1 | AN212 | GOVT PU COLLEGE | KODIGEHALLY | BANGALORE 560092 | | 40000 | 40000 |
| 2 | AN525 | GOVT PU COLLEGE | JAKKUR | BANGALORE NORTH | | 40000 | 40000 |
| 3 | AS090 | GOVT PU COLLEGE | VARTHUR | BANGALORE 560087 | 60000 | | 60000 |
| 4 | AS111 | GOVT PU COLLEGE | YEDIYUR 6TH BLOCK JAYANAGAR | BANGALORE | 31000 | | 31000 |
| 5 | AS113 | GOVT PU COLLEGE NEW FORT | CHAMARAJPET PM ROAD | BANGALORE 560018 | 60000 | | 60000 |
| 6 | AS189 | GOVT ABS COMP PU COLLEGE | ANEKAL | BANGALORE | 31000 | | 31000 |
| 7 | AS321 | GOVT PU COLLEGE | ADUGODI | BANGALORE 560030 | 60000 | | 60000 |
| 8 | AS548 | GOVT PU COLLEGE | BYATARAYANAPURA MYSORE RD | BANGALORE SOUTH | 60000 | | 60000 |
| 9 | BB024 | GOVT PU COLLEGE | VIJAYAPURA DEVANAHALLI TQ | BANGALORE DT 562135 | 60000 | | 60000 |
| 10 | BB064 | GOVT PU COLLEGE | VISWANATHAPURA D HALLI TQ | BANGALORE DT 562110 | | 40000 | 40000 |
| 11 | BB131 | GOVT PU COLLEGE | YANTAGANAHALLY NELMANGALA | BANGALORE RURAL DIST | 60000 | | 60000 |
| 12 | BB136 | GOVT PU COLLEGE FOR GIRLS | HOSAKOTE | BANGALORE RURAL DIST | | 40000 | 40000 |
| 13 | BR055 | GOVT PU COLLEGE | THIPPASANDRA MAGADI TQ | RAMANAGAR DIST | 60000 | | 60000 |
| 14 | CC130 | GOVT PU COLLEGE | KAMALAPURA HOSPET TQ | BELLARY DIST | | 40000 | 40000 |
| 15 | FF018 | GOVT PU COLLEGE | THANAKUSHNUR AURAD TQ | BIDAR DT 585436 | | 40000 | 40000 |
| 16 | FF079 | GOVT PU COLLEGE | BASAVAKALYAN | BIDAR DT 585327 | 60000 | | 60000 |
| 17 | GD295 | GOVT PU COLLEGE | NALLUR CHANNAGIRI TQ | DAVANGERE DIST | 60000 | | 60000 |
| 18 | GG004 | GOVT PU COLLEGE | POONA BANGALORE ROAD | CHITRADURGA DT 577501 | | 40000 | 40000 |
| 19 | GG300 | GOVT PU COLLEGE | ARANAKATTE HIRIYUR TQ | CHITRADURGA DIST | 60000 | | 60000 |
| 20 | HH071 | GOVT PU COLLEGE | KALASAPUR | CHICKMAGALUR DT | | 40000 | 40000 |
| 21 | JH311 | GOVT PU COLLEGE | SHIGGAON | HAVERI DIST | | 40000 | 40000 |
| 22 | JJ317 | GOVT PU COLLEGE | DEVARAHUBBALLI | DHARWAD DIST | | 40000 | 40000 |
| 23 | KK191 | GOVT PU COLLEGE | MADABOOLA CHITTAPUR TQ | GULBARGA DT 585317 | | 40000 | 40000 |
| 24 | KY170 | GOVT PU COLLEGE | KAKKERI SURPUR TQ | YADGIR DT | | 40000 | 40000 |
| 25 | LL100 | GOVT PU COLLEGE | KONANUR ARKALGUDU TQ | HASSAN DT 573130 | | 40000 | 40000 |
| 26 | MC068 | GOVT SSEA PU COLLEGE | GOURIBIDANUR | CHIKKABALLAPUR DT | | 40000 | 40000 |
| 27 | MC089 | GOVT PU COLLEGE FOR BOYS | CHINTAMANI | CHIKKABALLAPUR DT | | 40000 | 40000 |
| 28 | MM090 | GOVT NEW PU COLLEGE | ANTHARAGANGE ROAD. | KOLAR-563101 | | 40000 | 40000 |
| 29 | MM129 | GOVT PU COLLEGE FOR GIRLS | MULBAGAL | KOLAR DIST | | 40000 | 40000 |
| 30 | NC241 | GOVT PU COLLEGE | ALUR CR NAGAR TQ | CHAMARAJANAGAR DT | 60000 | | 60000 |
| 31 | NN030 | GOVT PU COLLEGE | MIRLE KR NAGAR TQ | MYSORE DT 571603 | | 40000 | 40000 |
| 32 | NN098 | GOVT PU COLLEGE | HANAGODU HUNSUR TQ | MYSORE DT 571105 | | 40000 | 40000 |
| 33 | NN210 | GOVT PU COLLEGE FOR GIRLS | BANNUR T NARASIPURA TQ | MYSORE DT | | 40000 | 40000 |
| 34 | NN262 | GOVT PU COLLEGE | KARYA NANJANGUD TQ | MYSORE DIST | 60000 | | 60000 |
| 35 | PP050 | GOVT PU COLLEGE | K HONNALAGERE MADDUR TQ | MANDYA DT 571433 | | 40000 | 40000 |
| 36 | PP068 | GOVT PU COLLEGE FOR GIRLS | MADDUR | MANDYA DT 571428 | 60000 | | 60000 |
| 37 | RK057 | GOVT SMNM GIRLS PU COLLEG | GANGAVATHI | KOPPAL DT 583227 | 60000 | | 60000 |
| 38 | RR168 | GOVT PU COLLEGE | TURVIHAL SINDHNUR TQ | RAICHUR DIST | 60000 | | 60000 |
| 39 | SS220 | GOVT PU COLLEGE FOR GIRLS | PUTTUR | SK DIST | 60000 | | 60000 |
| 40 | SU112 | GOVT PU COLLEGE | BAJAGOLI KARKALA TQ | UDUPI DT 574122 | 60000 | | 60000 |
| 41 | SU140 | GOVT PU COLLEGE | SANOOR KARKALA TQ | UDUPI DT 574114 | 60000 | | 60000 |
| 42 | UU124 | GOVT PU COLLEGE | DANDINASHIVARA T KERE TQ | TUMKUR DT 572215 | 60000 | | 60000 |
| 43 | UU130 | GOVT PU COLLEGE | BORANAKANIVE CN HALLI TQ | TUMKUR DT 572218 | 60000 | | 60000 |
| 44 | UU252 | GOVT PU COLLEGE | YALLAPUR TUMKUR TQ | TUMKUR DIST | 60000 | | 60000 |
| | | | | TOTAL | 1322000 | 840000 | 2162000 |

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು-560 012.